<u>ಮಾಧ್ಯಮ ಮಾಹಿತಿ</u>

# ಕರ್ನಾಟಕ ವಿಧಾನಸಭಾ 2013ರ ಚುನಾವಣೆಯಲ್ಲಿ ಶಾಸಕರ ಚುನಾವಣಾ ವೆಚ್ಚದ ವಿಶ್ಲೇಷಣೆ

ಜನಗಳ ಪ್ರಾತಿನಿಧಿತ್ವ ಕಾಯ್ದೆ 1951ರ ಸೆಕ್ಷನ್ 78ರ ಪ್ರಕಾರ ಪ್ರತಿಯೊಬ್ಬ ಚುನಾಯಿತ ಅಭ್ಯರ್ಥಿಗಳು ಚುನಾವಣಾ ಫಲಿತಾಂಶ ಘೋಷಣೆಯಾದ 30 ದಿನದೊಳಗಾಗಿ ತಮ್ಮ ಚುನಾವಣಾ ವೆಚ್ಚದ ಅಸಲು ಪ್ರತಿಯನ್ನು ಎಲ್ಲಾ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಸಲ್ಲಿಸಬೇಕು. 2013ರ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಪ್ರತಿ ಸ್ಪರ್ಧಿಗೆ ಭಾರತೀಯ ಚುನಾವಣಾ ಆಯೋಗ ನಿಗದಿಪಡಿಸಿದ್ದ ಚುನಾವಣಾ ವೆಚ್ಚದ ಹಣದ ಮಿತಿಯ ಪ್ರಮಾಣ ರೂ. 16 ಲಕ್ಷಗಳು. ಇದು ಕಾಲಕಾಲಕ್ಕೆ ಬದಲಾಗುತ್ತದೆ.

ರಾಷ್ಟ್ರೀಯ ಚುನಾವಣಾ ಕಾವಲು ಮತ್ತು ಪ್ರಜಾಪ್ರಭುತ್ವ ಸುಧಾರಣೆಗಾಗಿ ಸಂಘಟನೆಗಳು ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಚುನಾಯಿತರಾದ 224 ಶಾಸಕರಲ್ಲಿ 213 ಶಾಸಕರ ಚುನಾವಣಾ ವೆಚ್ಚ ಕುರಿತು ಮಾಡಿದ ಸ್ವಘೋಷಣೆಯನ್ನು ವಿಶ್ಲೇಷಿಸಿದೆ. ಈ ಚುನಾವಣಾ ವೆಚ್ಚದ ವರದಿಯು ಸಾರ್ವಜನಿಕ ಸಭೆ ಮತ್ತು ಮೆರವಣಿಗೆ, ವಿದ್ಯುನ್ಮಾನ ಮತ್ತು ಮುದ್ರಣ ಮಾಧ್ಯಮಗಳ ಮೂಲಕ ಪ್ರಚಾರ, ಪ್ರಚಾರ ಕಾರ್ಯಕರ್ತರ ಖರ್ಚು, ವಾಹನ ಮತ್ತು ಪ್ರಚಾರ ಸಾಮಗ್ರಿಗಳ ವೆಚ್ಚವನ್ನು ಒಳಗೊಂಡಿದೆ.

## ಕರ್ನಾಟಕ ವಿಧಾನಸಭಾ 2013ರ ಚುನಾವಣೆಯಲ್ಲಿ ಶಾಸಕರ ಚುನಾವಣಾ ವೆಚ್ಚದ ಮುಖ್ಯಾಂಶಗಳು

1. ***ಚುನಾವಣೆಯ ಸರಾಸರಿ ವೆಚ್ಚ:*** ಹೊಸದಾಗಿ ಚುನಾಯಿತರಾದ 224 ಶಾಸಕರಲ್ಲಿ 213 ಶಾಸಕರು ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಚುನಾವಣಾ ವೆಚ್ಚದ ಪ್ರಕಾರ, ಚುನಾಯಿತ ಶಾಸಕರು ವೆಚ್ಚ ಮಾಡಿರುವ ಸರಾಸರಿ ಮೊತ್ತ ರೂ. 7.43 ಲಕ್ಷಗಳು ಮತ್ತು ಇದು ಚುನಾವಣಾ ಆಯೋಗ ನಿಗದಿಪಡಿಸಿರುವ ಮೊತ್ತದ ಶೇಕಡಾ 46ರಷ್ಟು.

2. ***ಪಕ್ಷಾವಾರು ಸರಾಸರಿ ಚುನಾವಣಾ ವೆಚ್ಚ:*** ಪಕ್ಷಾವಾರು ಚುನಾವಣಾ ವೆಚ್ಚವನ್ನು ಪರಿಗಣಿಸಿದರೆ ಭಾರತೀಯ ಕಾಂಗ್ರೆಸ್ ಪಕ್ಷದ 117 ಶಾಸಕರ ಸರಾಸರಿ ಚುನಾವಣಾ ವೆಚ್ಚ ರೂ. 7.53 ಲಕ್ಷಗಳು (ಅಥವಾ ನಿಗದಿಪಡಿಸಿದ ಮೊತ್ತದ ಶೇ. 47ರಷ್ಟು), ಭಾರತೀಯ ಜನತಾ ಪಕ್ಷದ 37 ಶಾಸಕರ ಸರಾಸರಿ ಚುನಾವಣಾ ವೆಚ್ಚ ರೂ. 7.20 ಲಕ್ಷಗಳು (ಅಥವಾ ನಿಗದಿಪಡಿಸಿದ ಮೊತ್ತದ ಶೇ. 45ರಷ್ಟು), ಜಾತ್ಯಾತೀತ ಜನತಾ ದಳದ 37 ಶಾಸಕರ ಸರಾಸರಿ ಚುನಾವಣಾ ವೆಚ್ಚ ರೂ. 7.47 ಲಕ್ಷಗಳು (ಅಥವಾ ನಿಗದಿಪಡಿಸಿದ ಮೊತ್ತದ ಶೇ. 47ರಷ್ಟು), ಕರ್ನಾಟಕ ಜನತಾ ಪಕ್ಷದ 6 ಶಾಸಕರು ಸರಾಸರಿ ಚುನಾವಣಾ ವೆಚ್ಚ ರೂ. 7.20 ಲಕ್ಷಗಳು (ಅಥವಾ ನಿಗದಿಪಡಿಸಿದ ಮೊತ್ತದ ಶೇ. 45ರಷ್ಟು), ಬಿ.ಎಸ್.ಆರ್.ಸಿ. ಪಕ್ಷದ 4 ಶಾಸಕರ ಸರಾಸರಿ ಚುನಾವಣಾ ವೆಚ್ಚ ರೂ. 6.09 ಲಕ್ಷಗಳು (ಅಥವಾ ನಿಗದಿಪಡಿಸಿದ ಮೊತ್ತದ ಶೇ. 38ರಷ್ಟು).

3. ***ನಿಗದಿಪಡಿಸಿದ ಹಣಕ್ಕಿಂತ ಹೆಚ್ಚು ವೆಚ್ಚ ಮಾಡಿರುವವರು:*** ಕೇವಲ ಒಬ್ಬರು ಶಾಸಕರು ಮಾತ್ರ ಚುನಾವಣಾ ಆಯೋಗ ನಿಗದಿಪಡಿಸಿದ್ದಕ್ಕಿಂತ ಹೆಚ್ಚು ಹಣವನ್ನು ವೆಚ್ಚ ಮಾಡಿದ್ದಾರೆ. ಜಾತ್ಯಾತೀಯ ಜನತಾ ದಳದ ಬಸವಕಲ್ಯಾಣ ಕ್ಷೇತ್ರದ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ ರವರು ಚುನಾವಣೆಗೆ ವೆಚ್ಚ ಮಾಡಿರುವ ಮೊತ್ತ ರೂ. 16.03 ಲಕ್ಷಗಳು.

4. ***ಕಡಿಮೆ ಚುನಾವಣಾ ವೆಚ್ಚ:*** ಒಟ್ಟು 15 ಶಾಸಕರು (ವಿಶ್ಲೇಷಿಸಿದ 213 ಶಾಸಕರಲ್ಲಿ) ತಮ್ಮ ಚುನಾವಣಾ ವೆಚ್ಚವನ್ನು 4 ಲಕ್ಷಕ್ಕಿಂತ ಕಡಿಮೆ ಎಂದು ಘೋಷಿಸಿದ್ದಾರೆ (ಅಥವಾ ನಿಗದಿಪಡಿಸಿದ ಮೊತ್ತದ ಶೇ. 25ರಷ್ಟು)

5. ***ಹೆಚ್ಚು ಚುನಾವಣಾ ವೆಚ್ಚ ಮಾಡಿದ 3 ಶಾಸಕರು:*** ಅತಿ ಹೆಚ್ಚು ಚುನಾವಣಾ ವೆಚ್ಚವಾದ (ಅಥವಾ ನಿಗದಿಪಡಿಸಿದ ಮೊತ್ತದ ಶೇ. 100ಕ್ಕೂ ಹೆಚ್ಚು) ರೂ. 16.03 ಲಕ್ಷವನ್ನು ಘೋಷಿಸಿಕೊಂಡಿರುವವರು ಜಾತ್ಯಾತೀಯ ಜನತಾ ದಳದ ಬಸವಕಲ್ಯಾಣ ಕ್ಷೇತ್ರದ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾರವರು, ನಂತರದಲ್ಲಿ ಕಾರವಾರ ಕ್ಷೇತ್ರದ ಪಕ್ಷೇತರ ಶಾಸಕರಾದ ಸತೀಶ್ ಸೈಲ್ ಕೃಷ್ಣರವರು ರೂ. 13.22 ಲಕ್ಷಗಳ (ಅಥವಾ ನಿಗದಿಪಡಿಸಿದ ಮೊತ್ತದ ಶೇ. 83ರಷ್ಟು) ಚುನಾವಣಾ ವೆಚ್ಚವನ್ನು ಘೋಷಿಸಿಕೊಂಡಿದ್ದಾರೆ ಮತ್ತು ಭಾರತೀಯ ಕಾಂಗ್ರೆಸ್ ಪಕ್ಷದ ಬ್ಯಾಡಗಿ ಕ್ಷೇತ್ರದ ಬಸವರಾಜ

ನೀಲಪ್ಪ ಶಿವಣ್ಣನವರ್ ರವರು ರೂ. 13.10 ಲಕ್ಷಗಳ (ಅಥವಾ ನಿಗದಿಪಡಿಸಿದ ಮೊತ್ತದ ಶೇ. 82ರಷ್ಟು) ಚುನಾವಣಾ ವೆಚ್ಚವನ್ನು ಘೋಷಿಸಿಕೊಂಡಿದ್ದಾರೆ.

6. ***ಅತಿ ಕಡಿಮೆ ವೆಚ್ಚ ಮಾಡಿರುವ ಶಾಸಕರು:*** ಅತ್ಯಂತ ಕಡಿಮೆ ವೆಚ್ಚವಾದ ರೂ. 1.13 ಲಕ್ಷಗಳನ್ನು (ಅಥವಾ ನಿಗದಿಪಡಿಸಿದ ಮೊತ್ತದ ಶೇ. 7ರಷ್ಟು) ಘೋಷಿಸಿಕೊಂಡಿರುವವರು ಭಾರತೀಯ ಕಾಂಗ್ರೆಸ್ ಪಕ್ಷದ ಬಾಗೇಪಲ್ಲಿ ಕ್ಷೇತ್ರದ ಎಸ್. ಎನ್. ಸುಬ್ಬಾರೆಡ್ಡಿರವರು, ನಂತರದ ಸ್ಥಾನದಲ್ಲಿ ಭಾರತೀಯ ಕಾಂಗ್ರೆಸ್ ಪಕ್ಷದ ಶ್ರೀನಿವಾಸಪುರ ಕ್ಷೇತ್ರದ ಕೆ.ಆರ್. ರಮೇಶ್ ಕುಮಾರ್ ರವರು ರೂ. 2.54 ಲಕ್ಷ (ಅಥವಾ ನಿಗದಿಪಡಿಸಿದ ಮೊತ್ತದ ಶೇ. 16ರಷ್ಟು) ಚುನಾವಣಾ ವೆಚ್ಚವನ್ನು ಘೋಷಿಸಿಕೊಂಡಿದ್ದಾರೆ ಮತ್ತು ಭಾರತೀಯ ಕಾಂಗ್ರೆಸ್ ಪಕ್ಷದ ಮಧುಗಿರಿ ಕ್ಷೇತ್ರದ ಕ್ಯಾತಸಂದ್ರ ಎನ್. ರಾಜಣ್ಣರವರು ರೂ. 3.07 ಲಕ್ಷಗಳ (ಅಥವಾ ನಿಗದಿಪಡಿಸಿದ ಮೊತ್ತದ ಶೇ. 19ರಷ್ಟು) ಚುನಾವಣಾ ವೆಚ್ಚವನ್ನು ಘೋಷಿಸಿಕೊಂಡಿದ್ದಾರೆ.

7. ***ಘೋಷಿಸಿಕೊಂಡ ಆಸ್ತಿಯ ಮೊತ್ತಕ್ಕಿಂತ ಹೆಚ್ಚು ಚುನಾವಣಾ ವೆಚ್ಚ ಮಾಡಿರುವವರು:*** ಕೇವಲ ಒಬ್ಬರು ಶಾಸಕರು ಮಾತ್ರ 2013 ವಿಧಾನಸಭಾ ಚುನಾವಣೆಯಲ್ಲಿ ಘೋಷಿಸಿಕೊಂಡ ಒಟ್ಟು ಆಸ್ತಿಗಿಂತ ಹೆಚ್ಚು ಚುನಾವಣಾ ವೆಚ್ಚವನ್ನು ಮಾಡಿದ್ದಾರೆ. ಭಾರತೀಯ ಕಾಂಗ್ರೆಸ್ ಪಕ್ಷದ ಜಗಳೂರು ಕ್ಷೇತ್ರದ ಹೆಚ್.ಪಿ. ರಾಜೇಶ್ ರವರ ಚುನಾವಣೆಗೆ ಮುಂಚೆ ಚುನಾವಣಾ ಆಯೋಗಕ್ಕೆ ಸಲ್ಲಿಸಿದ್ದ ಒಟ್ಟಾರೆ ಆಸ್ತಿಗಿಂತ ಹೆಚ್ಚು ಹಣವನ್ನು ಚುನಾವಣೆಗೆ ಖರ್ಚು ಮಾಡಿದ್ದಾರೆ. (ಘೋಷಿಸಿದ್ದ ಒಟ್ಟು ಆಸ್ತಿಯ ಮೊತ್ತ ರೂ. 7.50 ಲಕ್ಷಗಳು; ಘೋಷಿಸಿದ ಚುನಾವಣಾ ವೆಚ್ಚ ರೂ. 11.89 ಲಕ್ಷಗಳು)

8. ***ಸಾರ್ವಜನಿಕ ಸಭೆಗಳು ಮತ್ತು ಮೆರವಣಿಗೆಗಳ ವೆಚ್ಚ:*** ವಿಶ್ಲೇಷಿಸಿದ 213 ಶಾಸಕರಲ್ಲಿ 28 ಶಾಸಕರು ತಾವು ಸಾರ್ವಜನಿಕ ಸಭೆ, ಮೆರವಣಿಗೆ ಇತ್ಯಾದಿಗಳಿಗೆ ಯಾವುದೇ ಖರ್ಚು ಮಾಡಿಲ್ಲ ಎಂದು ಘೋಷಿಸಿಕೊಂಡಿದ್ದಾರೆ.

9. ***ವಿದ್ಯುನ್ಮಾನ ಮತ್ತು ಮುದ್ರಣ ಮಾಧ್ಯಮಗಳ ಮೂಲಕ ಪ್ರಚಾರದ ವೆಚ್ಚ:*** 73 ಶಾಸಕರು ತಾವು ವಿದ್ಯುನ್ಮಾನ ಮತ್ತು ಮುದ್ರಣ ಮಾಧ್ಯಮಗಳ ಮೂಲಕ ಪ್ರಚಾರಕ್ಕೆ ಯಾವುದೇ ಖರ್ಚು ಮಾಡಿಲ್ಲ ಎಂದು ಘೋಷಿಸಿದ್ದಾರೆ.

10. ***ಪ್ರಚಾರ ಕಾರ್ಯಕರ್ತರ ವೆಚ್ಚ:*** 102 ಶಾಸಕರು ತಾವು ಚುನಾವಣಾ ಪ್ರಚಾರದಲ್ಲಿ ಭಾಗಿಯಾದ ಕಾರ್ಯಕರ್ತರಿಗೆ ಯಾವುದೇ ರೀತಿಯ ಖರ್ಚು ಮಾಡಿಲ್ಲ ಎಂದು ಘೋಷಿಸಿದ್ದಾರೆ.

11. ***ವಾಹನ ಬಳಕೆಯ ವೆಚ್ಚ:*** ಕೇವಲ ಒಬ್ಬ ಶಾಸಕರು ತಾವು ರೂ. 10,000ಕ್ಕೂ ಕಡಿಮೆ ಹಣವನ್ನು ವಾಹನ ಬಳಕೆಗೆ ಖರ್ಚು ಮಾಡಿದ್ದಾರೆಂದು ಘೋಷಿಸಿದ್ದಾರೆ. ಭಾರತೀಯ ಜನತಾ ಪಕ್ಷದ ಶಿಗ್ಗಾಂವ್ ಕ್ಷೇತ್ರದ ಬಸವರಾಜ ಬೊಮ್ಮಾಯಿರವರು ತಾವು ಕೇವಲ ರೂ. 5,201ಗಳನ್ನು ವಾಹನ ಬಳಕೆಗೆ ಬಳಸಿದ್ದಾರೆಂದು ಘೋಷಿಸಿದ್ದಾರೆ.

12. ***ಪ್ರಚಾರ ಸಾಮಗ್ರಿಗಳು, ಕಮಾನುಗಳು, ಬ್ಯಾನರ್‌ಗಳು ಇತ್ಯಾದಿಗಳ ವೆಚ್ಚ:*** ಕೇವಲ ಒಬ್ಬ ಶಾಸಕರು ತಾವು ಪ್ರಚಾರ ಸಾಮಗ್ರಿಗಳು, ಕಮಾನುಗಳು, ಬ್ಯಾನರ್‌ಗಳು ಇತ್ಯಾದಿಗಳ ಮೇಲೆ ಯಾವುದೇ ಹಣವನ್ನು ವೆಚ್ಚ ಮಾಡಿಲ್ಲವೆಂದು ಘೋಷಿಸಿದ್ದಾರೆ. ಜಾತ್ಯಾತೀತ ಜನತಾ ದಳದ ಸೊರಬ ಕ್ಷೇತ್ರದ ಎಸ್. ಮಧು ಬಂಗಾರಪ್ಪನವರು ಪ್ರಚಾರ ಸಾಮಗ್ರಿಗಳು, ಕಮಾನುಗಳು, ಬ್ಯಾನರ್‌ಗಳು ಇತ್ಯಾದಿಗಳ ಮೇಲೆ ಯಾವುದೇ ಹಣವನ್ನು ವೆಚ್ಚ ಮಾಡಿಲ್ಲವೆಂದು ಘೋಷಿಸಿದ್ದಾರೆ.